**ದಿನಾಂಕಃ** 11.06.2026.**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಎದುರುದಾರರ ಪರ ಶ್ರೀ. ಟಿ. ಎಂ. ಎ ವಕೀಲರಿಂದಃ**

**ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.**

| | | |
|---|---|---|
| ನಿ.ಆರ್. 2 | : | ಪೊಲೀಸ್ ನೀಡಿರುವ ಸ್ವೀಕೃತಿ |
| ನಿ.ಆರ್. 3 | : | ಪೊಲೀಸ್ ರವರಿಗೆ ನೀಡಿದ ದೂರು. |
| ನಿ.ಆರ್. 4 | : | ಪೊಲೀಸ್ ನೀಡಿದ ಸ್ವೀಕೃತಿ |
| ನಿ.ಆರ್. 5 | : | ವೈದ್ಯರು ನೀಡಿರುವ ಪತ್ರ |
| ನಿ.ಆರ್. 6ಮತ್ತು 7 | : | ಆಸ್ಪತ್ರೆ ರಶೀದಿಗಳು |

ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕಾಗಿ ಪ್ರಾರ್ಥನೆ.

**ಪಾಟೀ ಸವಾಲು : ಅರ್ಜಿದಾರರ ಪರ ಶ್ರೀ. ಎ. ಬಿ. ಕೆ. ವಕೀಲರಿಂದ ಃ –**

ಮದುವೆಯಾಗಿ 4 – 5 ತಿಂಗಳ ಕಾಲ ಚೆನ್ನಾಗಿದ್ದೆವು. ಈಗಲೂ ನಾನು ಮೊದಲನೇ ಹೆಂಡತಿ ಜೊತೆ ಇದ್ದೇನೆ ಎಂದರೆ ಸರಿ. ಮೊದಲನೇ ಹೆಂಡತಿ, ನಾನು, ಅರ್ಜಿದಾರಳು ಒಟ್ಟಿಗೆ ಇರುವುದು ಸಹಿಸಲು ಆಗಲಿಲ್ಲ ಎಂದರೆ ಸರಿಯಲ್ಲ. ನಂತರ ನಾನು ಅರ್ಜಿದಾರಳಿಗೆ ಅವರ ಜೊತೆ ಸೇರಿ ಮಾನಸಿಕ ಮತ್ತು ದೈಹಿಕ ತೊಂದರೆ ಕೊಟ್ಟೆ ಎಂದರೆ ಸರಿಯಲ್ಲ. ಅರ್ಜಿದಾರಳನ್ನು ಮದುವೆ ಆದಾಗ Kotak Mahindra Insurance ನಲ್ಲಿ 2015 ರಲ್ಲಿ ಕೆಲಸದಲ್ಲಿದ್ದೆ ಎಂದರೆ ಸರಿ. ಅರ್ಜಿದಾರಳು ನನ್ನನ್ನು ಮತ್ತು ನನ್ನ ಒಂದನೇ ಹೆಂಡತಿಯನ್ನು ಹೊರಹಾಕಲು ಪ್ರಯತ್ನ ಪಟ್ಟಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರಳು ನಮ್ಮ ಮೇಲೆ ಸುಳ್ಳು ಕೇಸ್ ಕೊಡಬಹುದೆಂದು ತಿಳಿದು ಈ ರೀತಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ತೊಂದರೆ ಕೊಟ್ಟಿದ್ದಕ್ಕೆ ಅರ್ಜಿದಾರಳು ಮನೆ ಬಿಟ್ಟು ತವರು ಮನೆಗೆ ಹೋಗಿದ್ದಾಳೆ ಎಂದರೆ ಸರಿಯಲ್ಲ. ಅರ್ಜಿದಾರಳು ಪೊ. ಠಾಣೆಯಲ್ಲಿ ತಪ್ಪಾಯಿತು ಎಂದು ಕೇಳಿಕೊಂಡ ಬಗ್ಗೆ ದಾಖಲೆ ಹಾಕಿಲ್ಲ ಎಂದರೆ ಸರಿಯಲ್ಲ. ಲಾಕ್ ಡೌನ್ ಆಗಿದ್ದ ಕಾರಣಕ್ಕೆ CDPO office ನಿಂದ ನೋಟೀಸ್ ಕೊಟ್ಟಿದ್ದರು ನನಗೆ ಕೋವಿಡ್ ಇದ್ದ ಕಾರಣಕ್ಕೆ ಹಾಜರಾಗಲು ಆಗಲಿಲ್ಲ. CDPO office

ನಿಂದ ನೋಟೀಸ್ ಬಂದ ನಿಂತರ ನಿ ಆರ್ 2 ರಿಂದ 6 ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನಾನು, ಅರ್ಜಿದಾರಳು ನಿ ಪಿ 11 ರಂತೆ ವಾಪಸ್ ಬಂದು ಜೀವನ ಮಾಡಲು ಅರ್ಜಿ ಹಾಕಿದ್ದೆ ಎಂದರೆ ಸರಿ. ಆ ಅರ್ಜಿಗೆ ಅರ್ಜಿದಾರಳು ಹಾಜರಾಗುತ್ತಿದ್ದಳು ಎಂದರೆ ಒಂದು ಬಾರಿ ಬಂದಿರುತ್ತಾಳೆ. ಅರ್ಜಿದಾರಳು ಅರ್ಜಿ ಮುಗಿಯುವರೆಗೂ ಬರುತ್ತಿದ್ದಳು ಎಂದರೆ ಸರಿಯಲ್ಲ. ಅರ್ಜಿದಾರಳು ಹೋಗದ ಕಾರಣಕ್ಕೆ ಅವರ ವಿರುದ್ಧ ಆ ಅರ್ಜಿ ಆದೇಶ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿ. 03.10.2018 ರಂದು ನಾನು ಮತ್ತು ನನ್ನ ವಕೀಲರು ಹೋಗದ ಕಾರಣಕ್ಕೆ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಅರ್ಜಿಯ ಆದೇಶವನ್ನು ಮತ್ತು ಇತರೇ ದಾಖಲೆಗಳನ್ನು ಅವಶ್ಯಕತೆ ಇಲ್ಲದ ಕಾರಣಕ್ಕೆ ಹಾಕಿಲ್ಲ. ನನ್ನ ವಿರುದ್ಧ ಆಗಿರುವ ಕಾರಣಕ್ಕೆ ಆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಲೀಜ್ ನಂತರ ಮಾಡಿದ ಲೀಜ್‌ಗೆ ಇದ್ದ ಮನೆಯಲ್ಲೂ ಒಂದನೇ ಹೆಂಡತಿ ಬರುತ್ತಿದ್ದಳು ಎಂದರೆ ಸರಿಯಲ್ಲ. ಅಲ್ಲೂ ಕೂಡ ನಾನು ಮತ್ತು ಮೊದಲನೇ ಹೆಂಡತಿ ತೊಂದರೆ ಕೊಡುತ್ತಿದ್ದೆವು ಎಂದರೆ ಸರಿಯಲ್ಲ. ಅರ್ಜಿದಾರಳು ಮೈಸೂರಿನ ಲಷ್ಕರ್ ಮೊಹಲ್ಲಾ ಮಹಿಳಾ ಪೊ. ಠಾಣೆಗೆ ದೂರು ಕೊಟ್ಟಳು ಎಂದರೆ ಸರಿ. ಈ FIR ಆಗಿ ಈಗಲೂ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ಸರಿ. ಅರಕಲಗೂಡು ತಾಲ್ಲೂಕು, ಬಿಸಲ ಹಳ್ಳಿಯಲ್ಲಿ ನನಗೆ ಆಸ್ತಿ ಇದೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿ ಬಿಸಲ ಹಳ್ಳಿಯಲ್ಲಿ ಆಸ್ತಿ ಇದೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಮೊಹಮ್ಮದ್ ಗೌಸ್ ಎಂದರೆ ಸರಿ. ನನ್ನ ಅಣ್ಣ ಮೊಹಮ್ಮದ್ ಗನ್ನಿ ಎಂದರೆ ಅವರು ಹಿರಿಯ ಹೆಂಡತಿಯ ಮಗ, ನಮಗೂ ಅವರಿಗೂ ಸಂಬಂಧ ಇಲ್ಲ. ನನ್ನ ಅಣ್ಣನ ಮಗ ರಿಜ್ವಾನ್ ಫರ್ವೇಸ್ ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ಅವರ ಆಸ್ತಿ ನನ್ನ ಅಣ್ಣನ ಹೆಸರಿಗೆ ಬಂತು ಎಂದರೆ ಸರಿಯಲ್ಲ. ಈ ಪ್ರಕರಣಗಳು ಅರ್ಜಿದಾರಳ ಜೊತೆ ನಡೆಯುತ್ತಿರುವ ಕಾರಣಕ್ಕೆ ನನ್ನ ಅಣ್ಣ ಅವರ ಮಗನ ಹೆಸರಿಗೆ ವರ್ಗಾಯಿಸಿರುತ್ತಾರೆ ಎಂದರೆ ಈ ಆಸ್ತಿಯು ಅವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ಈ ಆಸ್ತಿ ಕುಟುಂಬದ ಆಸ್ತಿ ಎಂದರೆ ಸರಿಯಲ್ಲ.

ಮಹೀಂದ್ರಾ ಗುಪ್ತಾರವರು ನಾನು ಕೆಲಸ ಮಾಡುತ್ತಿದ್ದಾಗ ಇದ್ದರು. ಇವರು ಅರ್ಜಿದಾರರ ಪರ court ನಿಂದ notice ಬಂದ ನಂತರ ಅವರ ಪರ ಸಾಕ್ಷ್ಯ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ, ಒಂದು ದಾಖಲೆ ಕೊಟ್ಟಿದ್ದಾರೆ. ಆ ದಾಖಲೆಗಳು ನಿ ಪಿ 9 ಮತ್ತು 10 ಎಂದರೆ ಸರಿ. ಆ ಎರಡು ದಾಖಲೆಗಳು September and October ತಿಂಗಳ ನನ್ನ pay slip ಗಳಾಗಿತ್ತು ಎಂದರೆ ಸರಿಯಲ್ಲ, ಅದು incentive ಆಗಿತ್ತು. ರೂ. 2,26,526/– ಹಣ ಮತ್ತು ನಿಪಿ 10 ರಂತೆ ರೂ. 2,32,473/– ಹಣ ಸಂಬಳವಾಗಿ ಬರುತ್ತಿತ್ತು ಎಂದರೆ ಸರಿಯಲ್ಲ, incentive ಆಗಿ ಬರುತ್ತಿತ್ತು. ನಂತರದ ತಿಂಗಳುಗಳಲ್ಲೂ ಇಷ್ಟು ಹಣ ಸಂಪಾದಿಸುತ್ತಿದ್ದೆ ಎಂದರೆ ಸರಿಯಲ್ಲ. ಇಷ್ಟು ಆದಾಯವಿದ್ದರೂ ಉದ್ದೇಶಪೂರ್ವಕವಾಗಿ ಅರ್ಜಿದಾರಳಿಗೆ ಯಾವುದೇ ಹಣ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ಅರ್ಜಿ ದಾಖಲಾದ ನಂತರ ನ್ಯಾಯಾಲಯದಿಂದ ನನಗೆ ನೋಟೀಸ್ ಬಂತು ಎಂದರೆ ಸರಿ. ಆದರೆ ಆಗ ನನಗೆ ಕೋವಿಡ್ ಆಗಿದ್ದು, ಮಗಳು ತೀರಿಕೊಂಡಿದ್ದು ಬರಲು ಆಗಿರುವುದಿಲ್ಲ. ನನಗೆ ಕೋವಿಡ್ ಆಗಿರಲಿಲ್ಲ, ಮಗಳು ಮೊದಲೇ ತೀರಿಕೊಂಡಿದ್ದಳು ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ CDPO notice ಮತ್ತು ನ್ಯಾಯಾಲಯದ ನೋಟೀಸ್‌ಗೂ ಪ್ರತಿಕ್ರಿಯಿಸಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರಳು ಆಗ ಜೀವನಾಂಶದ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ನ್ಯಾಯಾಲಯದಿಂದ ನೋಟೀಸ್ ಹೋಗಿ ನನಗೆ ತಲುಪಿದ ನಂತರ ನಾನು ನ್ಯಾಯಾಲಯಕ್ಕೆ ಬರುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಮೊದಲಿನಿಂದಲೂ ಬರುತ್ತಿದ್ದೇನೆ. ನನಗೆ ಹೃದ್ರೋಗ ಯಾವುದು ಇಲ್ಲ ಎಂದರೆ ಸರಿಯಲ್ಲ. ಸುಳ್ಳು ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಹಣದ ತಪಾತ್ರಯವಿಲ್ಲ ಎಂದರೆ ಸರಿಯಲ್ಲ. ಅವರು ಮದುವೆ ಸಮಯದಲ್ಲಿ ತೆಗೆದುಕೊಂಡು ಬಂದಂತಹ ಚಿನ್ನ ನನ್ನ ಬಳಿಯೇ ಇದೆ ಎಂದರೆ ಸರಿಯಲ್ಲ. ಜೀವನಾಂಶವನ್ನು ಈಕೆಗೆ ಕೊಡಬೇಕಾಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಂಪನಿ ಕಡೆಯಿಂದ ಸುಮಾರು ಬಾರಿ ವಿದೇಶ ಪ್ರಯಾಣ ಮಾಡಿದ್ದೇನೆ ಎಂದರೆ ಸರಿಯಲ್ಲ, ಒಂದು ಬಾರಿ ವಿದೇಶಕ್ಕೆ ಹೋಗಿರುತ್ತೇನೆ. ನನ್ನ ಬಳಿ passport ಈಗ lapse ಆಗಿದೆ

ಹಾಜರುಪಡಿಸುತ್ತೇನೆ. Lapse ಆಗಿಲ್ಲ ಈಗಲೂ passport ಚಾಲ್ತಿಯಲ್ಲಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**Sd/-**

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ